ಸೀರೆ ಸಾಂಪ್ರದಾಯಿಕ ಉಡುಗೆ. ಇದರ ಮೇಲೊಂದು ಬ್ಲೇಜರ್ ಹಾಕಿಕೊಳ್ಳುವ ಮೂಲಕ ಸ್ಟೈಲಿಷ್ ಆಗಿ ಕಾಣಿಸಿಕೊಳ್ಳಲು ಮುಂದಾಗಿದ್ದಾರೆ ಮಹಿಳೆಯರು. ಕಚೇರಿ, ಸಣ್ಣಪುಟ್ಟ ಕಾರ್ಯಕ್ರಮಗಳಿಗೆ ಹೋಗುವಾಗ ಸೀರೆಯ ಮೇಲೆ ಬ್ಲೇಜರ್ ಧರಿಸುವುದು ಇತ್ತೀಚಿನ ಟ್ರೆಂಡ್!

■ ಆಶಾ ಎಸ್. ಕುಲಕರ್ಣಿ



# ಸೀರೆಯ ಮೇಲೊಂದು ಬ್ಲೇಜರ್

## ಸಂಪ್ರದಾಯಕ್ಕೆ ಆಧುನಿಕ ಸ್ಪರ್ಶ



ಸೀರೆಯ ಮೇಲೆ ಬ್ಲೇಜರ್ ಧರಿಸುವುದು ಟ್ರೆಂಡ್ ಆಗಿದೆ. ಇದು ಸೊಗಸಾದ ಫ್ಯಾಷನ್ ಶೈಲಿ ಎಂದೂ ಹೇಳಬಹುದು. ಸಾಂಪ್ರದಾಯಿಕ ಸೀರೆಗೆ ಆಧುನಿಕ ಟಚ್ ನೀಡುವುದಲ್ಲದೆ ಸ್ಟೈಲಿಷ್ ಆಗಿ ಕಾಣಲೂ ಸಹಕಾರಿ. ಇದನ್ನು ಔಪಚಾರಿಕ ಕಾರ್ಯಕ್ರಮಗಳು, ಕಚೇರಿ, ಚಳಿಯಿಂದ ರಕ್ಷಣೆ ಪಡೆಯುವುದರ ಸಲುವಾಗಿ ಧರಿಸಬಹುದು. ಸೀರೆಯ ಸೊಬಗನ್ನು ಹೆಚ್ಚಿಸಲು ಬ್ಲೇಜರ್‌ಗಳು ಸಹಾಯ ಮಾಡುತ್ತವೆ.

ಸೀರೆಯ ಫ್ಯಾಷನ್ ಇಂದು ನಿನ್ನೆಯದಲ್ಲ. ಯಾವುದೇ ಪಾಶ್ಚಾತ್ಯ ಉಡುಪು ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಟ್ಟರೂ ಸೀರೆ ತನ್ನ ಸ್ಥಾನವನ್ನು ಬಿಟ್ಟುಕೊಡದೇ ಗಟ್ಟಿಯಾಗಿ ನಿಂತಿರುವ ಜೊತೆಗೆ ಇನ್ನಷ್ಟು ನವನವೀನ ವಿನ್ಯಾಸದೊಂದಿಗೆ ಕಂಗೊಳಿಸುತ್ತಿದೆ. ಸೀರೆಗಳ ಜೊತೆ ಧರಿಸುವ ರವಿಕೆಗಳಲ್ಲಿಯೂ ಸಾಕಷ್ಟು ವೈವಿಧ್ಯವಿದೆ. ಹಾಗೇ ಇದೀಗ ಸೀರೆಯ ಜೊತೆ ಧರಿಸಲು ಬ್ಲೇಜರ್‌ಗಳು ಮಾರುಕಟ್ಟೆಗೆ ಎಂಟ್ರಿ ಕೊಟ್ಟು, ಫ್ಯಾಷನ್ ಲೋಕದಲ್ಲಿ ಒಂದು ಹೊಸ ಟ್ರೆಂಡ್ ಹುಟ್ಟುಹಾಕಿವೆ ಎನ್ನಬಹುದು.

ಸೀರೆಯ ಜೊತೆ ಬ್ಲೇಜರ್ ಎಂಬುದು ಹೊಸ ಪರಿಕಲ್ಪನೆ. ಚಳಿಗಾಲದ ಸಮಯ ಇದಾಗಿರುವುದರಿಂದ ಇಂಥ ಮೈಕೊರೆಯುವ ಚಳಿಯ ನಡುವೆಯೂ ಸಭೆ ಸಮಾರಂಭಗಳು, ಶುಭ ಕಾರ್ಯಗಳು, ಮದುವೆ ಇತ್ಯಾದಿ ಕಾರ್ಯಕ್ರಮಗಳಲ್ಲಿ ಇದೀಗ ಸೀರೆಯ ಜೊತೆಗೆ ಧರಿಸುವ ಬ್ಲೇಜರ್‌ಗಳು ಟ್ರೆಂಡಿಯಾಗಿವೆ.

ಇಂಡೋ ವೆಸ್ಟರ್ನ್ ಸ್ಟೈಲ್ ಪಡೆಯಲು ಹಾಗೂ ಚಳಿಯಿಂದ ರಕ್ಷಿಸಿಕೊಳ್ಳಲು ಈ ಬ್ಲೇಜರ್‌ಗಳು ನಮಗೆ ಸಹಾಯ ಮಾಡುತ್ತವೆ. ಧರಿಸುವ ಯಾವುದೇ ಸೀರೆಯಿರಬಹುದು ಅದರ ಮೇಲೆ ಬ್ಲೇಜರ್ ಧರಿಸಬಹುದೆಂದು ಫ್ಯಾಷನ್